# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1665 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 18.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪೋಡಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದ್ದು, ರೈತರು ತಮ್ಮ ಜಮೀನುಗಳಿಗೆ ಪೋಡಿ ಮಾಡಿಸಿಕೊಳ್ಳಲು ಕಛೇರಿಗಳಿಗೆ ನಿತ್ಯ ಅಲೆದಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ಪೋಡಿ ಇತ್ಯರ್ಥಕ್ಕೆ ರಾಜ್ಯಾದ್ಯಂತ ಪ್ರಸ್ತುತ ಬಾಕಿ ಇರುವ ಪ್ರಕರಣಗಳ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು) | ಯಾವುದೇ ವಿಧದ ಪೋಡಿ ಕೆಲಸವನ್ನು ಕಂದಾಯ ದಾಖಲೆಗಳನ್ವಯ ಪೋಡಿ ಪ್ರಕರಣಗಳನ್ನು ತಂತ್ರಾಂಶದ ಸಹಾಯದಿಂದ ಆನ್‌ಲೈನ್ ಮುಖಾಂತರ ನಿರ್ವಹಿಸಲಾಗುತ್ತಿದೆ.<br><br>ಪ್ರಸ್ತುತ ರಾಜ್ಯದಲ್ಲಿ ಮೋಜಿಣಿ ತಂತ್ರಾಂಶದಲ್ಲಿ ಸಾರ್ವಜನಿಕರಿಂದ ಸ್ವೀಕೃತವಾದ ಒಟ್ಟು 5,70,116 ವಿವಿಧ ರೀತಿಯ ಪೋಡಿ ಅರ್ಜಿಗಳು ಬಾಕಿ ಇರುತ್ತವೆ. ಈ ಪೈಕಿ 1,60,214 ಅರ್ಜಿಗಳು ಪಹಣಿ ತಿದ್ದುಪಡಿಗಾಗಿ ತಾಲ್ಲೂಕು ಕಛೇರಿಗಳಲ್ಲಿ ಮತ್ತು 4,09,902 ಅರ್ಜಿಗಳು ಅಳತೆ ಮತ್ತು ವಿವಿಧ ಹಂತದಲ್ಲಿ ಭೂಮಾಪನ ಇಲಾಖೆಯಲ್ಲಿ ಬಾಕಿಯಿರುತ್ತವೆ.<br><br>ಜಿಲ್ಲಾವಾರು ಪ್ರತ್ಯೇಕ ವಿವರವನ್ನು ಅನುಬಂಧ ರಲ್ಲಿ ನೀಡಿದೆ. |
| ಇ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಪೋಡಿ ಇತ್ಯರ್ಥದ ಅತೀ ಹೆಚ್ಚು ಪ್ರಕರಣಗಳು ದೀರ್ಘ ಕಾಲದಿಂದ ಬಾಕಿ ಇದ್ದು, ಜಿಲ್ಲೆಯಲ್ಲಿ ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ಇದುವರೆಗೆ ಯಾವುದೇ ಸೂಕ್ತ ಹಾಗೂ ಅಗತ್ಯ ಕ್ರಮ ವಹಿಸದಿರಲು ಕಾರಣಗಳೇನು; | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫೆಬ್ರುವರಿ-2026ರ ಮಾಹೆಯ ಅಂತ್ಯಕ್ಕೆ ಒಟ್ಟು 37,604 ಅರ್ಜಿಗಳು ಬಾಕಿ ಇರುತ್ತವೆ. ಈ ಪೈಕಿ 11,888 ಅರ್ಜಿಗಳು ಪಹಣಿ ತಿದ್ದುಪಡಿಗಾಗಿ ತಾಲ್ಲೂಕು ಕಛೇರಿಯಲ್ಲಿ ಮತ್ತು 25,716 ಅರ್ಜಿಗಳು ಅಳತೆ ಮತ್ತು ವಿವಿಧ ಹಂತದಲ್ಲಿ ಭೂಮಾಪನ ಇಲಾಖೆಯಲ್ಲಿ ಬಾಕಿಯಿರುತ್ತವೆ.<br><br>ಪೋಡಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳ ಇತ್ಯರ್ಥ ವಿಳಂಬವಾಗಿರುವುದಿಲ್ಲ. ಕಳೆದ ಎರಡು ವರ್ಷಗಳಿಂದ ಬಾಕಿ ಇರುವ ಪೋಡಿ ಪ್ರಕರಣಗಳ ಸಂಖ್ಯೆಯು ಹಿಂದಿನ ವರ್ಷಗಳಿಗೆ ತಾಳೆ ನೋಡಿದಾಗ ಗಣನೀಯವಾಗಿ ಕಡಿಮೆಯಾಗಿರುತ್ತದೆ. ಹಿಂದಿನ ವರ್ಷಗಳಲ್ಲಿ ಒಂದು ಕಡತದ ವಿಲೇ ಅವಧಿಯು ಸರಾಸರಿ 4 ರಿಂದ 10 ತಿಂಗಳ ಕಾಲಾವಧಿ ತೆಗೆದುಕೊಳ್ಳುತ್ತಿತ್ತು. ಪ್ರಸ್ತುತ ಈ ಅವಧಿಯು ಒಂದು ತಿಂಗಳಿಂದ ಎರಡು ತಿಂಗಳಿಗೆ ಸೀಮಿತಗೊಂಡಿರುತ್ತದೆ.<br><br>ಪೋಡಿ ಪ್ರಕರಣಗಳು ಬಾಕಿ ಇರಲು ಪ್ರಮುಖ ಕಾರಣಗಳು :<br>1. ಆಕಾರಬಂದು & ಪಹಣಿ ಹಾಗೂ ಪಹಣಿ ಕಾಲಂ 03 & |
| ಈ) | ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿಗಳು ಅತೀ ದೀರ್ಘ ಕಾಲದಿಂದ ಹಾಗೆಯೇ ಬಾಕಿ ಉಳಿದಿದ್ದು, ಯಾವ ಕಾಲಮಿತಿಯೊಳಗೆ ಜಿಲ್ಲೆಯಲ್ಲಿ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಸಂಪೂರ್ಣವಾಗಿ ವಿಲೇವಾರಿ ಮಾಡಲಾಗುವುದು? | |

| | | |
|---|---|---|
| | | 09 ರಲ್ಲಿ ವಿಸ್ತೀರ್ಣದ ವ್ಯತ್ಯಾಸಗಳಿದ್ದು ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು (ಮ್ಯುಟೇಷನ್, ಪಹಣಿ, ಮಂಜೂರಿ ಆದೇಶ-ಇತರೆ) ಲಭ್ಯವಾಗದಿರುವುದು;<br>2. ನಮೂನೆ 01-05 ಭರ್ತಿ ಮಾಡಲು ಕನಿಷ್ಠ ಮಂಜೂರಿ ದಾಖಲೆ ಲಭ್ಯವಾಗದೇ ಇರುವುದು;<br>3. ಮಂಜೂರಿ/ಹಕ್ಕಿನಂತೆ & ಅನುಭವದ ವಿಸ್ತೀರ್ಣದ ವ್ಯತ್ಯಾಸವಿರುವುದರಿಂದ;<br>4. ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿದ್ದು, ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗುವುದು;<br>5. ಅಳತೆ ವೇಳೆ ಜಮೀನಿನ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಮತ್ತು ವ್ಯಾಜ್ಯಗಳು ಇರುವುದು;<br>6. ಸರ್ಕಾರಿ/ಪರವಾನಗಿ ಭೂಮಾಪಕರಿಗೆ ಪ್ರತಿ ಮಾಹೆ ನಿಗಧಿತ ಗುರಿಯಂತೆ ಕೆಲಸ ನಿರ್ವಹಿಸುತ್ತಿದ್ದು, ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಿಯಾಗುತ್ತಿರುವುದು.<br><br>ಪ್ರಸ್ತುತ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೋಜಿಣಿ ತಂತ್ರಾಂಶದಲ್ಲಿ 124 ಪರವಾನಗಿ ಭೂಮಾಪಕರುಗಳು ಮತ್ತು 21 ಸರ್ಕಾರಿ ಭೂಮಾಪಕರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರ್ವಜನಿಕರು ಅಳತೆ ಕೋರಿ ಸಲ್ಲಿಸುವ ಅರ್ಜಿಗಳಲ್ಲಿನ ಯಾವುದೇ ಸಮಸ್ಯೆಗಳು ಇಲ್ಲದಿದ್ದಲ್ಲಿ ಸರಾಸರಿಯಾಗಿ ಸ್ವೀಕೃತಿಯಾದ ದಿನದಿಂದ 46 ದಿನಗಳು ಮತ್ತು ಭೂಮಾಪಕರಿಗೆ ಹಂಚಿಕೆಯಾದ ದಿನದಿಂದ 19 ದಿನಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಕಿಯಿರುವ ಪೋಡಿ ಪ್ರಕರಣಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು :<br><br>1. ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್ ನಲ್ಲಿ ಸ್ವೀಕರಿಸಲಾಗುತ್ತಿದ್ದು, ಮೋಜಿಣಿ ತಂತ್ರಾಂಶದ ಮೂಲಕವೇ ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮಾಡಿ, ಅಳತೆಯಾದ ನಂತರ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲೇ ಸರದಿ ಸಾಲಿನಂತೆ (FIFO) ನಿರ್ವಹಿಸುವ ಮೂಲಕ ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ.<br>2. ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ.<br>3. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆಗಳನ್ನು ನೀಡಲಾಗುತ್ತಿದೆ. |

| | | |
|---|---|---|
| | | 4. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>5. ಅಳತೆ ಕಾರ್ಯವನ್ನು ತ್ವರಿತವಾಗಿ ನಿರ್ವಹಿಸಲು ಭೂಮಾಪಕರಿಗೆ ರೋವರ್ ಉಪಕರಣಗಳನ್ನು ಹಂತ ಹಂತವಾಗಿ ಖರೀದಿಸಿ ಒದಗಿಸಲಾಗುತ್ತಿದೆ. ಈಗಾಗಲೇ ಸುಮಾರು 590 ರೋವರ್‌ಗಳನ್ನು ಭೂಮಾಪಕರಿಗೆ ಒದಗಿಸಲಾಗಿದೆ.<br><br>ಈ ಮೇಲ್ಕಂಡ ಕ್ರಮಗಳಿಂದಾಗಿ ಬಾಕಿಯಿರುವ ಪೋಡಿ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತಿದೆ. |

ಸಂಖ್ಯೆ: ಕಂಇ 65 ಎಸ್ ಎಸ್ ಸಿ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಅನುಭಮದ-01 Stared LCQ 180(1665)

## ಮೊಜಿಣಿ ತಂತ್ರಾಂಶದಲ್ಲಿ ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳ ಮಾಹೆ ಫೆಬ್ರುವರಿ-2026 ರ ಜಿಲ್ಲಾವಾರು ಪ್ರಗತಿ

| ಕ್ರ | ಜಿಲ್ಲೆ | ಪ್ರಾ. ಶಿಲ್ಕು | ಸ್ವೀಕೃತಿ | ಒಟ್ಟು | ವಿಲೆ | ಬಾಕಿ | ಕಂದಾಯ ಶಾಖೆಯಲ್ಲಿ ಬಾಕಿ | ಭೂಮಾಪನ ಶಾಖೆಯಲ್ಲಿ ಬಾಕಿ |
|---|---|---|---|---|---|---|---|---|
| 1 | ಉಡುಪಿ | 19918 | 5552 | 25470 | 4561 | 20909 | 6075 | 14834 |
| 2 | ಉತ್ತರಕನ್ನಡ | 9073 | 3185 | 12258 | 2464 | 9794 | 1226 | 8568 |
| 3 | ಕೊಡಗು | 4357 | 1336 | 5693 | 1146 | 4547 | 294 | 4253 |
| 4 | ಕೊಪ್ಪಳ | 11883 | 3533 | 15416 | 2953 | 12463 | 4428 | 8035 |
| 5 | ಕೋಲಾರ | 19345 | 3184 | 22529 | 2782 | 19747 | 5079 | 14668 |
| 6 | ಗದಗ | 7332 | 2208 | 9540 | 1929 | 7611 | 1478 | 6133 |
| 7 | ಗುಲ್ಬರ್ಗ | 17090 | 6095 | 23185 | 3613 | 19572 | 4403 | 15169 |
| 8 | ಚಾಮರಾಜನಗರ | 7073 | 2237 | 9310 | 2449 | 6861 | 1735 | 5126 |
| 9 | ಚಿಕ್ಕಬಳ್ಳಾಪುರ | 16186 | 4002 | 20188 | 1706 | 18482 | 4087 | 14395 |
| 10 | ಚಿಕ್ಕಮಗಳೂರು | 12563 | 3454 | 16017 | 2610 | 13407 | 5422 | 7985 |
| 11 | ಚಿತ್ರದುರ್ಗ | 20306 | 5064 | 25370 | 4277 | 21093 | 6134 | 14959 |
| 12 | ತುಮಕೂರು | 50741 | 10763 | 61504 | 5849 | 55655 | 15080 | 40575 |
| 13 | ದಕ್ಷಿಣ ಕನ್ನಡ | 35711 | 5532 | 41243 | 3639 | 37604 | 11888 | 25716 |
| 14 | ದಾವಣಗೆರೆ | 18121 | 4598 | 22719 | 4326 | 18393 | 7366 | 11027 |
| 15 | ಧಾರವಾಡ | 8563 | 2826 | 11389 | 2425 | 8964 | 1426 | 7538 |
| 16 | ಬಳ್ಳಾರಿ | 8470 | 3148 | 11618 | 2048 | 9570 | 1180 | 8390 |
| 17 | ಬಾಗಲಕೋಟೆ | 9237 | 5349 | 14586 | 3528 | 11058 | 2694 | 8364 |
| 18 | ಬಿಜಾಪುರ | 16672 | 6709 | 23381 | 5576 | 17805 | 3169 | 14636 |
| 19 | ಬೀದರ್ | 13998 | 4205 | 18203 | 2474 | 15729 | 7079 | 8650 |
| 20 | ಬೆಂಗಳೂರು ಗ್ರಾಮಾಂತರ | 18538 | 4620 | 23158 | 3722 | 19436 | 5794 | 13642 |
| 21 | ಬೆಂಗಳೂರು ಜಿಲ್ಲೆ | 15363 | 2802 | 18165 | 2947 | 15218 | 6384 | 8834 |
| 22 | ಬೆಂಗಳೂರು ದಕ್ಷಿಣ | 19823 | 4587 | 24410 | 4504 | 19906 | 4228 | 15678 |
| 23 | ಬೆಳಗಾವ | 27255 | 9610 | 36865 | 7655 | 29210 | 5887 | 23323 |
| 24 | ಮಂಡ್ಯ | 26317 | 6807 | 33124 | 6640 | 26484 | 9324 | 17160 |
| 25 | ಮೈಸೂರು | 21995 | 8266 | 30261 | 6453 | 23808 | 7613 | 16195 |
| 26 | ಯಾದಗಿರ್ | 11212 | 3634 | 14846 | 2729 | 12117 | 4089 | 8028 |
| 27 | ರಾಯಚೂರು | 18589 | 5704 | 24293 | 4130 | 20163 | 7003 | 13160 |
| 28 | ವಿಜಯನಗರ | 10594 | 3479 | 14073 | 2647 | 11426 | 2196 | 9230 |
| 29 | ಶಿವಮೊಗ್ಗ | 18974 | 3064 | 22038 | 1935 | 20103 | 6502 | 13601 |
| 30 | ಹಾವೇರಿ | 15549 | 4831 | 20380 | 4613 | 15767 | 4302 | 11465 |
| 31 | ಹಾಸನ | 25781 | 8129 | 33910 | 6696 | 27214 | 6649 | 20565 |
| | **Grand Total** | **536629** | **148513** | **685142** | **115026** | **570116** | **160214** | **409902** |